ಅವರು ಮೊನ್ನೆ ದಿವಸ ಭರವಸೆಯನ್ನು ಕೊಟ್ಟರು. ಅದ್ದರಿಂದ ದಯಮಾಡಿ ತಮಗೆ ಹೇಳುತ್ತಿದ್ದೇನೆ, ಮಧ್ಯಂತರ ವರದಿ ಏನು ಬಂದಿದೆ, ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಹೇಳಬೇಕು. ಇವತ್ತು ಬೆಳಿಗ್ಗೆ ಚಾಮರಾಜನಗರದಿಂದ ಜನರು ಬಂದಿದ್ದಾರೆ. ನೀರಾವರಿ ಪಂಪುಸೆಟ್ಟುಗಳು ಸಂಪೂರ್ಣವಾಗಿ ಕೆಟ್ಟುಹೋಗಿವೆ. ದಯವಿಟ್ಟು ಸರ್ಕಾರ ಪರಿಣಾಮಕಾರಿಯಾದಂಥ ಏನೊಂದು ಕ್ರಮ ಕೈಗೊಂಡಿದೆ ಎಂದು ಹೇಳಬೇಕೆಂದು ತಮ್ಮ ಮೂಲಕ ಮುಖ್ಯಮಂತ್ರಿಗಳಲ್ಲಿ ಕೇಳುತ್ತೇನೆ.

ಶ್ರೀ ಸಿ. ಬೈರೇಗೌಡ (ವೇಮಗಲ್) : ನಾನು ಸಹ ಇದರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೇನೆ. ಆದರೆ ಸರ್ಕಾರದಿಂದ ಯಾವುದೇ ಉತ್ತರ ಬರುತ್ತಿಲ್ಲ. ಇವತ್ತು ಕೋಲಾರ ಜಿಲ್ಲೆ ಮತ್ತು ಬೆಂಗಳೂರು ಜಿಲ್ಲೆಯಿಂದ ನೂರಾರು ರೈತರು ಬರುತ್ತಿದ್ದಾರೆ. ಮುಖ್ಯಮಂತ್ರಿಗಳ ಮನೆಮುಂದೆ ಧರಣಿ ಸತ್ಯಾಗ್ರಹ ಮಾಡಬೇಕೆಂದು ರೈತರು ಹೋಗಿದ್ದಾರೆ. ಅವರು ಸಣ್ಣಪುಟ್ಟ ಪ್ರತಿಭಟನೆ ಮಾಡಿದ್ದು ಆಯಿತು. ದೇವನಹಳ್ಳಿಯಲ್ಲಿ, ಚಿಂತಾಮಣಿಯಲ್ಲಿ, ಕೋಲಾರದಲ್ಲಿ ಪ್ರತಿಭಟನೆ ನಡೆಸಿದ್ದಾಯಿತು. ಮುಳಬಾಗಿಲು, ಕೋಲಾರದಲ್ಲಿ ನಡೆಯಿತು.

ಉಪಾಧ್ಯಕ್ಷರು : ಬೈರೇಗೌಡರೇ, ನೀವು ಕುಳಿತುಕೊಳ್ಳಿ

ಶ್ರೀ ಸಿ. ಬೈರೇಗೌಡ : ಪರಿಸ್ಥಿತಿ ದಿನೆದಿನೇ ಕೆಡುತ್ತಿದೆ. ಇವತ್ತಿನದಿವಸ ಕೋಲಾರಜಿಲ್ಲೆಯಿಂದ ಬೆಂಗಳೂರು ಜಿಲ್ಲೆಯಿಂದ ರೈತರು ಬರುತ್ತಿದ್ದಾರೆ. ರೈತರು ಮನೆಬಾಗಿಲಿಗೆ ಬಂದು ಹೇಳಿದರೂ ಕೂಡ ಏನೂ ಕ್ರಮ ತೆಗೆದುಕೊಳ್ಳದಿದ್ದರೆ ಹೇಗೆ? ನಿನ್ನೆ ಉಪಮುಖ್ಯಮಂತ್ರಿಗಳು ಹೇಳಿದರು ಏನೆಂದರೆ ಇವತ್ತಿನ ದಿವಸ ತಾವು ಹೈದರಾಬಾದಿಗೆ ಹೋಗಿ ನಾಳೆ ಸ್ಟೇಟ್‌ಮೆಂಟ್ ಮಾಡುತ್ತೇನೆ ಎಂದು. ಆದರೆ ಆ ಪರಿಸ್ಥಿತಿ ಇಲ್ಲ. ಒಂದು ನಿಮಿಷ ಕೂಡ ತಡೆಯುವುದಕ್ಕೆ ಸಾಧ್ಯವಿಲ್ಲದೇ ಇರತಕ್ಕಂಥ ಪರಿಸ್ಥಿತಿ ಉಂಟಾಗಿದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ತೀವ್ರವಾಗಿ ಗಮನ ಹರಿಸಬೇಕೆಂದು ಮತ್ತೊಮ್ಮೆ ತಮ್ಮ ಮೂಲಕ ನಾನು ವಿನಂತಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ವಿದ್ಯುಚ್ಛಕ್ತಿ ಮಂತ್ರಿಗಳು ಎಲ್ಲಿ ಹೋಗಿದ್ದಾರೋ ಗೊತ್ತಿಲ್ಲ. ಅವರು ಈ ಸದನದಲ್ಲಿ ಇರಬೇಕಾಗಿತ್ತು. ಅವರು ಹೈದರಾಬಾದಿಗೆ ಹೊಗಿದ್ದಾರೋ ಅಥವಾ ಇನ್ನು ಎಲ್ಲಿಗೆ ಹೋಗಿದ್ದಾರೋ ನನಗೆ ಗೊತ್ತಿಲ್ಲ. ಅವರು ಈ ಸದನಕ್ಕೆ ಬರಲೇ ಇಲ್ಲ. ಅವರನ್ನು ಅನೇಕಬಾರಿ ನಾವು ಕೇಳಿದ್ದಾಯಿತು. ಇದು ಬಹಳ ಅತ್ಯಂತ ನೋವಿನ ಪ್ರಸಂಗ ಆಗಿದೆ . ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗ ಸ್ಪಷ್ಟನೆ ಕೊಡಬೇಕು.

ಶ್ರೀ ಎಂ. ವೀರಪ್ಪ ಮೊಯ್ಲಿ (ಮುಖ್ಯ ಮಂತ್ರಿಗಳು) : ಸನ್ಮಾನ್ಯ ಉಪಾಧ್ಯಕ್ಷರೇ, ವಿದ್ಯುಚ್ಛಕ್ತಿ ಬಗ್ಗೆ, ಸದನದ ಎಲ್ಲಾ ಸದಸ್ಯರ ಕಳಕಳಿ ಇದೆ. ಅದು ತಮಗೆ ಗೊತ್ತಿದೆ. ಇದು ಇಡೀ ವ್ಯವಸ್ಥೆಯ ಒಂದು ಪ್ರಶ್ನೆ. ಇದರ ಬಗ್ಗೆ ಸದನದ ಸಮಿತಿಯನ್ನೂ ಕೂಡ ಮಾಡಿ ಆಗಿದೆ . ತಾವು ಕೂಡ ಹೆಚ್ಚಿನ ಸಹಕಾರ ಕೊಟ್ಟು ಒಂದು ಮಧ್ಯಂತರ ವರದಿಯನ್ನು ಕೊಟ್ಟಿದ್ದೀರಿ. ಆ ಮುಧ್ಯಂತರ ವರದಿಯ ಶಿಫಾರಸ್ಸನ್ನು ಪರಿಶೀಲನೆ

ಮಾಡಿಕೊಂಡು ಕೆ.ಇ.ಬಿ ಮತ್ತು ನಮ್ಮ ಸರ್ಕಾರ, ಇವತ್ತು ಅಥವಾ ನಾಳೆ ಈ ಬಗ್ಗೆ ಸೂಕ್ತವಾದಂಥ ಪರಿಹಾರ, ಅಥವಾ ಸೂಕ್ತವಾದಂಥ ನಿರ್ಣಯ ತೆಗೆದುಕೊಳ್ಳುವ ಬಗ್ಗೆ ನಾವು ತಯಾರಿಯಲ್ಲಿದ್ದೇವೆ. ಆ ಶಿಫಾರಸ್ ಸರ್ಕಾರದಲ್ಲಿದೆ. ಅದನ್ನು ಅನುಷ್ಠಾನ ಮಾಡುವುದಕ್ಕೆ, ಉಸಿರಾಡುವಷ್ಟಾದರೂ ಸಮಯವನ್ನು ಕೊಡಬೇಕಲ್ಲ. We are at it. ನಾವು ಬಹಳ ಚುರುಕ್ಕಾಗಿದ್ದೇವೆ. ನಾವು ಚುರುಕಾಗಿಯೇ ಕೆಲಸ ಮಾಡುವುದು. ಏನಾದರೂ ನಿರ್ಣಯ ತೆಗೆದುಕೊಳ್ಳಬೇಕಾದರೆ, ನಮ್ಮದು ಜೀವನದ ಸಿದ್ಧಾಂತ ಎಂದು ಹೇಳಿದರೆ, ನಾಳೆ ಮಾಡುವುದನ್ನು ಇವತ್ತೇ ಮಾಡಬೇಕು ಎಂದು ಹೇಳುವಂಥಾದ್ದು . We do not delay. ಅದರ ಬಗ್ಗೆ ಈಗಾಗಲೇ ಸಿದ್ಧತೆ ನಡೆದಿದೆ, ನಾವು ನಿರ್ಣಯ ತೆಗೆದುಕೊಳ್ಳುತ್ತಿದ್ದೇವೆ. ಇವತ್ತು ಜನತೆಯ ಒಂದು ಅಳಲನ್ನು ಸ್ಪಷ್ಟವಾಗಿ ಅರಿತುಕೊಂಡು ನಾವು ನಿರ್ಣಯ ತೆಗೆದು ಕೊಳ್ಳಬೇಕಾಗುತ್ತದೆ. ನಾಳೆ ದಿವಸ 8ನೇ ತಾರೀಖು, ಸದನ ಮುಗಿಯುವುದರಿಂದ. ನಾಳೆನೇ ಆದರ ಬಗ್ಗೆ ಸ್ಪಷ್ಟವಾಗಿ ಹೇಳಿಕೆ ಕೊಡುತ್ತೇವೆ . We require some time. ಏಕೆಂದರೆ,ಇವೆಲ್ಲಾ ರಾತ್ರಿ ಬೆಳಗಾಗುವುದರೊಳಗಾಗಿ We cannot change the whole system in the K.E.B. ಇದಕ್ಕೆ ಸಮಯ ಬೇಕಾಗುತ್ತದೆ. ನಾವು ಏನಾದರೂ ಹೇಳಿಕೆ ಕೊಟ್ಟರೆ, ನಾಳೆ on that ground ಏನಾದರೂಬದಲಾವಣೆ ಆಗಬೇಕಲ್ಲ. ನಿರ್ಣಯ ತೆಗೆದುಕೊಳ್ಳುವುದು ಸುಲಭ, ಆದರೆ, ಏನೋ ನಿರ್ಣಯ ತೆಗೆದುಕೊಳ್ಳಬೇಕಾಗಿದ್ದರೂ ಕೂಡ, ನಿಸ್ಸಂ ಬಗ್ಗೆ ನಾವು ಸ್ಟೆಡಿ ಮಾಡುತ್ತಿದ್ದೇವೆ. ಆದ್ದರಿಂದ ನಾಳೆ ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ತಾವು 8ನೇ ತಾರೀಖು ಎಂದು ಹೇಳುತ್ತೀರಿ, ಪ್ರತಿಯೊಂದನ್ನೂ ನಾಳೆ ಹೇಳುತ್ತೇವೆಂದು ಹೇಳಿದರೆ, ಹೇಗೆ ? ರೈತರ ವಿಷಯದ ಬಗ್ಗೆ ನಾಳೆ ಹೇಳುತ್ತೇವೆಂದು ಹೇಳಿದಿರಿ,ವಿದ್ಯುಚ್ಛಕ್ತಿ ಬಗ್ಗೆಯೂ ನಾಳೆ ಹೇಳುತ್ತೇನೆಂದು ಹೇಳುತ್ತೀರಿ.

-(ಗೊಂದಲ)-

ಉಪಾಧ್ಯಕ್ಷರು : ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ : ನಾವು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳತಕ್ಕ ಪ್ರಶ್ನೆ ಇಲ್ಲ. ನಾಳೆ ಕನ್ನಡದ ಅನುಷ್ಠಾನದ ಬಗ್ಗೆ ಹೇಳಿಕೆ ಕೊಡುತ್ತೇವೆ, ಅಮೇಲೆ ಕೆಇಬಿ ಬಗ್ಗೆ ಹೇಳಿಕೆ ಕೊಡುತ್ತೇವೆ, ರೈತರ ಸಾಲ ಬಡ್ಡಿ, ಪೀನಲ್ ಬಡ್ಡಿ ಅದರ ವಿಷಯವಾಗಿ ನಾವು ಹೇಳಿಕೆ ಕೊಡುತ್ತೇವೆ. ಬಹುಶ : ರಾಜಕೀಯವಾಗಿ ನೋಡಿದರೆ, ನಿಮಗೆ ತೃಪ್ತಿಬರಲಿಕ್ಕಿಲ್ಲ. ಆದರೆ ವಾಸ್ತವಿಕವಾಗಿ ನೋಡಿದರೆ, ಬಹಳ ನೆಮ್ಮದಿ ಬರತಕ್ಕಂಥ ಹೇಳಿಕೆಯನ್ನೇ ಕೊಡುತ್ತೇವೆ. ಏನೂ ಹೆದರಬೇಡಿ?

(ಗೊಂದಲ)

ಉಪಾಧ್ಯಕ್ಷರು : ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ನಾಳೆ ಹೇಳಿಕೆ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಾಳೆ ನಿಮ್ಮ ಭವಿಷ್ಯ ಚೆನ್ನಾಗಿದೆಯೇ, ನಿಮಗೆ ಅದೃಷ್ಟದ ದಿನವೋ ಏನೋ ಗೊತ್ತಿಲ್ಲ. ಆ ರೀತಿ ಏನಾದರೂ ಇದ್ದರೆ ನಾವು ಸಂತೋಷಪಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಪ್ರಮುಖವಾದ ವಿಷಯವನ್ನು ಇನ್ನೂ ನಾವು ಪ್ರಸ್ತಾಪ ಮಾಡಲೇ ಇಲ್ಲ. ಇವತ್ತು ಬಹಳ ಪ್ರಮುಖವಾದ ವಿಷಯ ಇದ್ದು, ಅದನ್ನು ನಾವು ಪ್ರಸ್ತಾಪ ಮಾಡಲಿಲ್ಲ.

ಡಾ॥ ಜೀವರಾಜ ಆಳ್ವ : 8ನೇ ತಾರೀಖಿಸ್ವರ್ಗ ಭೂಮಿಗೆ ಇಳಿಯುತ್ತಿದೆಯೇ? ಏಕೆಂದರೆ, ಬಹಳ ವಿಚಾರಗಳಿಗೆ ನಾಳೆಯೇ ಹೇಳಿಕೆ ಕೊಡುತ್ತೇನೆಂದು ಹೇಳುತ್ತೀರಿ.

ಶ್ರೀ ಎಂ. ವೀರಪ್ಪಮೊಯ್ಲಿ : 8ನೇ ಅಂಕ very lucky number. My car no.is also 8.

ಶ್ರೀ ವಾಟಾಳ್ ನಾಗರಾಜ್ : ತಾವು ತಪ್ಪು ತಿಳಿದುಕೊಳ್ಳಬಾರದು.

ಉಪಾಧ್ಯಕ್ಷರು : ದಯಮಾಡಿ ನೀವು ಕುಳಿತುಕೊಳ್ಳಬೇಕು. ನಾಳೆ ಹೇಳಿಕೆ ಕೊಡುತ್ತೇನೆಂದು ಹೇಳಿದ್ದಾರೆ. ಮತ್ತೆ ಅದನ್ನೇ ಪ್ರಸ್ತಾಪ ಮಾಡುವುದು ಬೇಡ.

ಶ್ರೀ ವಾಟಾಳ್ ನಾಗರಾಜ್ : ಕೋಳಿ ಸಚಿವರು, ಕೋಳಿ ಸಮ್ಮೇಳನಕ್ಕೆ ಕೇರಳಕ್ಕೆ ಹೋಗಿದ್ದಾರು. ಸಮ್ಮೇಳನ ಮುಗಿಸಿಕೊಂಡು ಬಂದಿದ್ದಾರೆ, ಅದೇನು ಸಮ್ಮೇಳನ ಎಂದು ಏನಾದರೂ ಅವರು ಹೇಳಲಿ.

ಉಪಾಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ, ಈಗಾಗಲೇ ಒಂದೂವರೆ ಗಂಟೆಯಾಗಿದೆ.

ಅರ್ಜಿಗಳ ನ್ನೊಪ್ಪಿಸುವುದು

ಶ್ರೀ ಜಿ. ಎಸ್. ಆಚಾರ್ : ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಅರ್ಜಿಗಳನ್ನು ಸದನಕ್ಕೆ ಒಪ್ಪಿಸುತ್ತಿದ್ದೇನೆ.

ಅ) ಕುಂದಾಪುರ ತಾಲ್ಲೂಕು, ಮುದೂರು ಗ್ರಾಮಕ್ಕೆ ವಿದ್ಯುತ್ ಸರಬರಾಜು ಮಾಡುವ ಬಗ್ಗೆ.

ಆ) ಕುಂದಾಪುರ ತಾಲ್ಲೂಕಿನ ಕಿರಿಮಂಜೇಶ್ವರ ಹಾಗೂ ಇತರ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಸರಬರಾಜು ಮಾಡುವ ಬಗ್ಗೆ.

ಶಾಸನ ರಚನಾ ಕಾರ್ಯಕ್ರಮಗಳು

1) ರೇಣುಕಾ ಎಲ್ಲಮ್ಮ ದೇವಸ್ಥಾನ (ಆಡಳಿತ) (ತಿದ್ದುಪಡಿ) ವಿಧೇಯಕ, 1993

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, 1993 ರ ರೇಣುಕಾ ಎಲ್ಲಮ್ಮ ದೇವಸ್ಥಾನ (ಆಡಳಿತ) (ತಿದ್ದುಪಡಿ) ವಿದೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ,"1993ರ ರೇಣುಕಾ ಎಲ್ಲಮ್ಮ ದೇವಸ್ಥಾನ (ಆಡಳಿತ) ತಿದ್ದುಪಡಿ ವಿದೇಯಕವನ್ನು" ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, "1993ರ ರೇಣುಕಾ ಎಲ್ಲಮ್ಮ ದೇವಸ್ಥಾನ (ಆಡಳಿತ) (ತಿದ್ದುಪಡಿ) ವಿಧೇಯಕವನ್ನು" ಸಭೆಯ ಮುಂದೆ ಮಂಡಿಸುತ್ತೇನೆ.

ಉಪಾಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. *

ಅನುಬಂಧ

2)ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕ 1993

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, "1993ನೇ ಸಾಲಿನ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು" ಸಭೆಯ ಮುಂದೆ ಮಂಡಿಸಲು ಅನುಮತಿ ಕೋರುತ್ತೇನೆ.

ಉಪಾಧ್ಯಕ್ಷರು : ಪ್ರಸ್ತಾವ ಏನೆಂದರೆ, "1993ನೇ ಸಾಲಿನ ಕರ್ನಾಟಕ ಪೌರ ನಿಗಮಗಳ (ತಿದ್ದುಪಡಿ) ವಿಧೇಯಕವನ್ನು" ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತ್ತು ಮತ್ತು ಅನುಮತಿ ನೀಡಲಾಯಿತು.